ದಿನಾಂಕಃ19.10.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಡಿ. ವಕೀಲರಿಂದ:**

ನನ್ನ ಬಳಿ ಆಧಾರ್ ಕಾರ್ಡ್ ಇದೆ. ಅದನ್ನು ವಾದಿಗೆ ಕೊಟ್ಟಿದ್ದೆ. ನಿಪಿ-21 ರಲ್ಲಿ ನನ್ನ ಹಾಗೂ ನನ್ನ ತಾಯಿಯ ಹೆಸರು ಇಲ್ಲ ಎಂದರೆ ಸರಿ. ನನ್ನ ತಂದೆಯ ಸಹಿಯನ್ನು ನಿಖರವಾಗಿ ಗುರುತಿಸಲು ನನ್ನಿಂದ ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಸಹಿಯುಳ್ಳ ಇತರೆ ದಾಖಲೆ ನನ್ನ ಬಳಿ ಇಲ್ಲ. ನನ್ನ ತಂದೆ STD ಬೂತ್ ನಡೆಸುತ್ತಿದ್ದರು. STD ಬೂತ್ ತೆರೆಯಲು ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ STD ಬೂತ್ ಬೆಂಗಳೂರಿನ ರಾಜಾಜೀ ನಗರದಲ್ಲಿ ಇತ್ತು. ಜಯನಗರದಿಂದ ರಾಜಾಜೀ ನಗರಕ್ಕೆ 4 ಕಿ.ಮೀ ಅಂತರ ಇದೆ. 1985 ನೇ ಇಸವಿಯಲ್ಲಿ ನನ್ನ ತಂದೆಗೆ ಸುಮಾರು 30 ವರ್ಷ ವಯಸ್ಸಾಗಿರಬಹುದು. ನನ್ನ ತಂದೆ ತನ್ನ 27 ನೇ ವಯಸ್ಸಿಗೆ ಮದುವೆಯಾಗಿದ್ದಾರೆ. ಮದುವೆ ಕಾಲಕ್ಕೂ ಅವರು ರಾಜಾಜೀ ನಗರದಲ್ಲಿಯೇ ವಾಸಿಸುತ್ತಿದ್ದರು. ವಾದಿಯು ಸಹಾ ರಾಜಾಜೀ ನಗರದಲ್ಲಿಯೇ ವಾಸಿಸುತ್ತಿದ್ದರು. ನಿಪಿ-15 ರಲ್ಲಿ ನನ್ನ ತಂದೆಯ ಹೆಸರಾಗಲೀ ನನ್ನ ತಾತನ ಹೆಸರಾಗಲೀ ಇಲ್ಲ ಎಂದರೆ ಸರಿ.

ನಾನು ಸಹಾ ಈಗ ರಾಜಾಜೀ ನಗರದಲ್ಲಿ ವಾಸಿಸುತ್ತಿದ್ದೇನೆ. ನಿಪಿ-15(ಎ) ನನ್ನ ತಂದೆಯ ಸಹಿ ಅಲ್ಲದಿದ್ದರೂ ವಾದಿಯೊಂದಿಗೆ ಸೇರಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-15(ಎ) ರಂತೆ ಸಹಿ ಮಾಡಿರುವ ವ್ಯಕ್ತಿಯ ಮಗ ನಾನಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಹಾಜರಾಗುವ ಮುನ್ನ ವಾದಿ ನನಗೆ ನಿಪಿ-15 ರ ದಾಖಲೆಯನ್ನು ತೋರಿಸಿದ್ದರು. 1985 ರಲ್ಲಿ ವಾದಿ ಮೂಡಿಗೆರೆಯ ಮಾಕೋನಹಳ್ಳಿಯಲ್ಲಿ ವಾಸಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಮೂಡಿಗೆರೆಯವರು ಎಂದು ನನಗೆ ಗೊತ್ತಿದೆ ಆದರೆ ಮೂಡಿಗೆರೆಯ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ನಿಪಿ-21 ಮತ್ತು 22 ರ ದಾಖಲೆಯನ್ನು ಎರಡು ವರ್ಷದ ಹಿಂದೆ ವಾದಿಗೆ ಕೊಟ್ಟಿದ್ದೆ. ನಿಪಿ-15(ಎ) ಸಹಿ ನನ್ನ ತಂದೆಯದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-21 ಮತ್ತು 22 ರ ದಾಖಲೆ ನನಗೆ ಸಂಬಂದಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.